ಗಿಸುವ ಯೋಜನೆಗೆ ಶಿಫಾರಸ್ಸು ಮಾಡಿರುವ ವರದಿ ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಶಿಫಾರಸ್ಸಿನ ಪ್ರಕಾರ ರಾಜ್ಯದ ಅರಣ್ಯ ಇಲಾಖೆಯಿಂದ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸದರಿ ಯೋಜನೆಯನ್ನು ತಾಂತ್ರಿಕ ಸಮಿತಿಯು ಸಹ ಪರಿಶೀಲಿಸಲಾಗಿದ್ದು ಸಮಿತಿಯ ಸಲಹೆಗಳನ್ನು ಅಳವಡಿಸಿ ಯೋಜನಾ ವಿನ್ಯಾಸದಲ್ಲಿ ಮಾರ್ಪಾಡು ಮಾಡಲಾಗುತ್ತಿದೆ.

ಕುಂದಾಪುರ ತಾಲ್ಲೂಕಿನ ಸರಕಾರಿ ಶಿಕ್ಷಣ ಸಂಸ್ಥೆಗಳಿಗ ಅಧ್ಯಾಪಕರ ನೇಮಕ

(೬೧) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಸರಕಾರದಿಂದ ನಡೆಸಲ್ಪಡುತ್ತಿರುವ

೧. ಪ್ರಾಥಮಿಕ ಶಾಲೆ

೨. ಪ್ರೌಢಶಾಲೆ

೩. ಕಿರಿಯ ಕಾಲೇಜು

೪. ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಿಕ್ಷಕರ, ಶಿಕ್ಷಕೇತರ ಸಿಬ್ಬಂದಿ ಎಷ್ಟು ಕೊರತೆ ಇದೆ ?

(ಆ) ಅವನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

(ಅ) ಖಾಲಿ ಇರುವ ಶಿಕ್ಷಕರ ಹುದ್ದೆಗಳು.—

ಪ್ರಾಥಮಿಕ ಶಾಲೆ	...	೩
ಪ್ರೌಢಶಾಲೆ	...	೧೫
ಕಿರಿಯ ಕಾಲೇಜು	...	೧
ಪ್ರಥಮ ದರ್ಜೆ ಕಾಲೇಜು	...	ಇಲ್ಲ
ಖಾಲಿ ಇರುವ ಶಿಕ್ಷಕೇತರ ಹುದ್ದೆಗಳು	...	೧೭

(ಆ) ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಉಪ-ವಿಭಾಗದಲ್ಲಿ ಪ್ರವಾಹ ಕೊರೆತದಿಂದ ಹಾನಿ

೫೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು). – ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಉಪ-ವಿಭಾಗದಲ್ಲಿರುವ (೧) ಕನ್ನಡ ಕುದ್ರು (೨) ಉಪ್ಪಿನ ಕುದ್ರು (೩) ಕೊಡೇರಿ (ಕಿರಿ ಮಂಜೇಶ್ವರ) ಈ ಸ್ಥಳಗಳಲ್ಲಿ ಪ್ರವಾಹ ಕೊರೆತದಿಂದ ಹಾನಿ ಸಂಭವಿಸುತ್ತಿದ್ದು ಪಶ್ಚಿಮ ಘಟ್ಟ ಯೋಜನೆಯನ್ವಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಾಗಿ ಮಾನ್ಯ ಲೋಕೋಪಯೋಗಿ ಸಚಿವರು ನೀಡಿದ ಭರವಸೆಯ ಬೇರೆಗೆ ಈ ಬಗ್ಗೆ ಯಾವ ರೀತಿ ಕಾರ್ಯಕ್ರಮ ರೂಪಿಸಲಾಗಿದೆ.

(ಆ) ಆ ಕಾರ್ಯಗಳನ್ನು ಯಾವಾಗ ಮಾಡಿಸಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಉಪ್ಪಿನ ಕುದ್ರು ಮತ್ತು ಕೊಡೇರಿ (ಕಿರಿ ಮಂಜೇಶ್ವರ) ಇಲ್ಲಿಯ ಪ್ರವಾಹ ನಿಯಂತ್ರಣ ಕಾಮಗಾರಿಗಳನ್ನು ಕ್ರಮವಾಗಿ ೧೯೮೭-೮೮ ಮತ್ತು ೧೯೮೮-೮೯ರಲ್ಲಿ ಕೈಗೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯ ೫೦ರ ಐ.ಡಿ.ಡಬ್ಲ್ಯೂ.ಎ.ಜಿ.ಆರ್. ಶೀರ್ಷಿಕೆಯಲ್ಲಿ ಸೇರಿಸಲಾಗಿದೆ. ಉಳಿದ ಕನ್ನಡ ಕುದ್ರು

ಕಾವೇರಿಗಾರಿಯನ್ನು ೧೯೭೭-೮೮ರ ಕಾರ್ಯಕ್ರಮದ ಯೋಜನೆಯಲ್ಲಿ ಸೇರಿಸಲು ಪ್ರಯತ್ನಿಸಲಾಗುವುದು,

(ಆ) ಈ ಕೆಲಸಗಳಿಗೆ ಅಂದಾಜು ಪಟ್ಟಿಗಳು ತಯಾರಾಗುತ್ತಿದ್ದು, ಅವುಗಳಿಗೆ ಅನುಮೋದನೆ ದೊರೆತ ಮೇಲೆ ಕೈಗೆತ್ತಿಕೊಳ್ಳಲಾಗುವುದು.

ಕೃಷಿ ಸಹಾಯಕರ ಹುದ್ದೆಗೆ ಆಯ್ಕೆ ವಿಧಾನದ ಬಗ್ಗೆ

೨೨೭ ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೃಷಿ ಇಲಾಖೆಯ ಮೂಲಕ ಕೃಷಿ ಸಹಾಯಕರನ್ನು ಯಾವ ವಿಧಾನದಲ್ಲಿ ಆಯ್ಕೆ ಮಾಡಲಾಗುತ್ತಿದೆ ?

(ಆ) ಗ್ರಾಮಾಕರಣಿಕರ ಆಯ್ಕೆಗೆ ಜಿಲ್ಲಾ ಮಟ್ಟದಲ್ಲಿ ನೇಮಕಾತಿ ಸಮಿತಿ ಇರುವಂತೆ ಕೃಷಿ ಸಹಾಯಕರ ಹುದ್ದೆಗಳಿಗೆ ಆಯ್ಕೆಗಾಗಿ ಸಹಾ ಜಿಲ್ಲಾ ಮಟ್ಟದ ಸಮಿತಿ ತಮಿಳುನಾಡಿನಲ್ಲಿರುವಂತೆ ರಚಿಸುವುದು ಸೂಕ್ತವಲ್ಲವೇ ?

(ಇ) ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಬೆಳೆಗಳು ಹಾಗೂ ಬೇರೆ ಬೇರೆ ಗ್ರಾಮ ಭಾಷೆಗಳು ಇರುವುದರಿಂದ ರೈತರಿಗೆ ಅನುಕೂಲವಾಗುವಂತೆ ಆಯಾ ಜಿಲ್ಲೆಯವರನ್ನೇ ಕೃಷಿ ಸಹಾಯಕರನ್ನಾಗಿ ಆಯ್ಕೆ ಮಾಡಿ ತರಬೇತಿ ನೀಡಿ ನೇಮಕ ಮಾಡುವುದು ಉತ್ತಮವಲ್ಲವೇ ? ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರ ನಿಲುವೇನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯ ಸಚಿವರು).—

(ಅ) ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕರನ್ನು ಇಲಾಖಾ ನೇಮಕಾತಿ ಸಮಿತಿಯು ಮೂಲಕ ನೇರ ನೇಮಕಾತಿ ಆಯ್ಕೆ ನಿಯಮಾವಳಿ ೧೯೭೩ರಂತೆ ಆಯ್ಕೆ ಮಾಡಲಾಗುತ್ತದೆ. ಅವರ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ರಾಜ್ಯಕ್ಕೆ ಒಂದೇ ಒಂದು ಸಮಿತಿಯು ಇದೆ.

(ಆ) ಸಮಿತಿಗಳನ್ನು ಹೆಚ್ಚಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

(ಇ) ಸರ್ಕಾರವು ಈ ಸಲಹೆಯನ್ನು ಒಪ್ಪುವುದಿಲ್ಲ.

ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ನಡೆಯುತ್ತಿರುವ ಶೋಷಣೆ

೪೪ ಶ್ರೀ ಆರ್ ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಖಾಸಗಿ ಇಂಜಿನಿಯರಿಂಗ್ ಪಾಲಿಟೆಕ್ನಿಕ್, ಐಟಿಐ, ಟಿಸಿಹೆಚ್, ೧೧ನೇ ದರ್ಜೆ ಕಾಲೇಜು, ಕಿರಿಯ ಕಾಲೇಜ್, ಪ್ರೌಢಶಾಲೆ ಮಾಧ್ಯಮಿಕ ಪ್ರಾಥಮಿಕ ಮಂತ್ರು ನರ್ಸರಿ ಶಾಲೆಗಳ ಸಂಖ್ಯೆ ಎಷ್ಟು?

ಆ) ಸರ್ಕಾರದ ಅನುದಾನ ಹಾಗೂ ಇತರೆ ಅನುದಾನಗಳನ್ನು ಪಡೆಯುತ್ತಿರುವ ಸಂಸ್ಥೆಗಳ ಸಂಖ್ಯೆ ಎಷ್ಟು ಇದರ ವೊತ್ತವೆಷ್ಟು

ಇ) ಸರ್ಕಾರದವರು ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸೀಟುಗಳನ್ನು ಪಡೆದು ಸರ್ಕಾರದ ನಿಯಮಾವಳಿಯನ್ನು ಉಲ್ಲಂಘಿಸುತ್ತಿರುವ ಖಾಸಗಿ ವಿದ್ಯಾ ಸಂಸ್ಥೆಗಳ ಸಂಖ್ಯೆ ಎಷ್ಟು.

ಈ) ಸಾರ್ವಜನಿಕರ ಘೋಷಣೆಗಳಿಗೆ ಈಡಾಗಿರುವ ಖಾಸಗಿ ವಿದ್ಯಾ ಸಂಸ್ಥೆಗಳು ಯಾವುವು ಇವುಗಳನ್ನು ಹತೋಟಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುದು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿರುವ ಸಂಸ್ಥೆಗಳ ಮೇಲೆ ಯಾವ ತರಹದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ

ಶ್ರೀ ಡಿ.ಕೆ ವೆಂಜುನಾಥ್ (ಶಿಕ್ಷಣ ಮಂತ್ರಿಗಳು).—